# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 430
2. ಸದಸ್ಯರ ಹೆಸರು : ಶ್ರೀ ಎನ್. ರವಿಕುಮಾರ್
3. ಉತ್ತರಿಸುವ ದಿನಾಂಕ: : 22-12-2022
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿರುವ ಪೌರಕಾರ್ಮಿಕರ ಸಂಖ್ಯೆ ಎಷ್ಟು; ಖಾಯಂ ನೌಕರರ ಸಂಖ್ಯೆ ಎಷ್ಟು; ಮಹಿಳಾ ಪೌರಕಾರ್ಮಿಕರ ಸಂಖ್ಯೆ ಎಷ್ಟು; ಮಹಿಳಾ ಪೌರಕಾರ್ಮಿಕರಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ; ಕಳೆದ ಮೂರು ವರ್ಷಗಳಲ್ಲಿ ಎಷ್ಟು ಪೌರಕಾರ್ಮಿಕರನ್ನು ಖಾಯಂಗೊಳಿಸಲಾಗಿದೆ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಯಂ ಪೌರಕಾರ್ಮಿಕರ ಸಂಖ್ಯೆ: 1371, ಈ ಪೈಕಿ ಖಾಯಂ ಮಹಿಳಾ ಪೌರಕಾರ್ಮಿಕರ ಸಂಖ್ಯೆ: 701, ಮತ್ತು ನೇರವೇತನ ಪೌರಕಾರ್ಮಿಕರ ಸಂಖ್ಯೆ: 15403, ಈ ಪೈಕಿ ನೇರವೇತನ ಮಹಿಳಾ ಪೌರಕಾರ್ಮಿಕರ ಸಂಖ್ಯೆ: 13652.<br><br>ಹೀಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ಪೌರಕಾರ್ಮಿಕರ ಸಂಖ್ಯೆ: 16774.<br><br>ಖಾಯಂ ಮತ್ತು ನೇರವೇತನ ಪೌರಕಾರ್ಮಿಕರಿಗೆ ಒದಗಿಸಲಾಗಿರುವ ಸೌಕರ್ಯಗಳ (ಮಹಿಳಾ ಪೌರಕಾರ್ಮಿಕರು ಸೇರಿ) ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. ಕಳೆದ 3 ವರ್ಷಗಳಲ್ಲಿ ಯಾವುದೇ ಪೌರಕಾರ್ಮಿಕರನ್ನು ಖಾಯಂಗೊಳಿಸಲಾಗಿರುವುದಿಲ್ಲ. |
| ಆ) | ಕಸ ವಿಲೇವಾರಿಗೆ ಎಷ್ಟು ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ; ಸಂಸ್ಥೆಗಳಲ್ಲಿರುವ ನೌಕರರ ಸಂಖ್ಯೆ ಎಷ್ಟು; ಕಸ ವಿಲೇವಾರಿಗೆ ಗುತ್ತಿಗೆ ಪಡೆದಿರುವ ಸಂಸ್ಥೆಗಳು ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ಲು ಕ್ಲೇಮ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಕಲಿ ಪೌರಕಾರ್ಮಿಕರನ್ನು ಗುರುತಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ಲು ಕ್ಲೇಮು ಮಾಡಿರುವ ಸಂಸ್ಥೆಗಳನ್ನು ಬ್ಲಾಕ್ ಲಿಸ್ಟ್ಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿದೆಯೇ? | ಕಸ ವಿಲೇವಾರಿಗೆ ಒಟ್ಟು ಸುಮಾರು 410 ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ. ಇದಲ್ಲದೆ ಸದರಿ ಗುತ್ತಿಗೆದಾರರಡಿ ಸುಮಾರು 6300 ಕಾರ್ಮಿಕರು (ಚಾಲಕರು ಮತ್ತು ಸಹಾಯಕರು) ಕಾರ್ಯ ನಿರ್ವಹಿಸುತ್ತಿರುತ್ತಾರೆ. ಕಸ ವಿಲೇವಾರಿಗೆ ಗುತ್ತಿಗೆ ಪಡೆದಿರುವ ಸಂಸ್ಥೆಗಳಲ್ಲಿ ಯಾವುದೇ ಪೌರಕಾರ್ಮಿಕರು ಕೆಲಸವನ್ನು ನಿರ್ವಹಣೆ ಮಾಡುತ್ತಿರುವುದಿಲ್ಲ ಹಾಗೂ ಕಸ ವಿಲೇವಾರಿಗೆ ಗುತ್ತಿಗೆ ಪಡೆದಿರುವ ಸಂಸ್ಥೆಗಳು ನಕಲಿ ಪೌರಕಾರ್ಮಿಕರ ಹೆಸರಿನಲ್ಲಿ ಬಿಲ್ಲು ಕ್ಲೇಮ್ ಮಾಡುತ್ತಿರುವುದು ಪಾಲಿಕೆಯ ಗಮನಕ್ಕೆ ಈವರೆಗೆ ಯಾವುದೇ ಮಾಹಿತಿ/ದೂರು ಬಂದಿರುವುದಿಲ್ಲ. |

**ಸಂಖ್ಯೆ: ನಅಇ 233 ಬಿಬಿಎಲ್ 2022 (ಇ).**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ ಹಾಗೂ ನೇರವೇತನ ಪೌರಕಾರ್ಮಿಕರ ನೀಡುವ ಸೌಲಭ್ಯದ ಬಗ್ಗೆ ಮಾಹಿತಿ.

ವೈದ್ಯಕೀಯ ಸೌಲಭ್ಯ

1. ಪೌರಕಾರ್ಮಿಕರಿಗೆ ಮತ್ತು ಅವರ ಕುಟುಂಬದವರ ಆರೋಗ್ಯದ ಹಿತದೃಷ್ಟಿಯಿಂದ ಆರೋಗ್ಯ ಜಾಗೃತಿ ಶಿಬಿರವನ್ನು ಏರ್ಪಾಡಿಸಲಾಗುತ್ತಿದೆ. ಆರೋಗ್ಯ ತಪಾಸಣೆ ಕಾರ್ಯಕ್ರಮವನ್ನು ಕಡ್ಡಾಯವಾಗಿ 3 ತಿಂಗಳಿಗಳಿಗೊಮ್ಮೆ ಹಮ್ಮಿಕೊಳ್ಳಲಾಗುತ್ತಿದ್ದು, ತಪಾಸಣೆ ಸಂದರ್ಭದಲ್ಲಿ ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇದ್ದಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ರೂ. 1.75 ಲಕ್ಷದಿಂದ ರೂ. 2.50 ಲಕ್ಷ ಒಟ್ಟು 823 ಶಸ್ತ್ರ ಚಿಕಿತ್ಸೆಗಳು ರಾಜ್ಯದ ಸುಸಜ್ಜಿತ ಒಟ್ಟು 640 ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದು ರೋಗ ಮುಕ್ತರಾಗುವ ಅವಕಾಶವಿರುತ್ತದೆ.
2. ಪಾಲಿಕೆಯ ಖಾಯಂ ಪೌರಕಾರ್ಮಿಕರುಗಳಿಗೆ ವೈದ್ಯಕೀಯ ಸೌಲಭ್ಯಗಳಿಗಾಗಿ Health Card ನೀಡಲಾಗಿರುತ್ತದೆ. ಪಾಲಿಕೆಯ ಎಲ್ಲಾ ನೇರವೇತನ ಪೌರಕಾರ್ಮಿಕರಿಗೆ ವೈದ್ಯಕೀಯ ಮತ್ತು ಹೆರಿಗೆ ರಜೆಗಳ ವೇತನವನ್ನು ಇ.ಎಸ್.ಐ ಮೂಲಕ ಪಾವತಿಸಲು ಕ್ರಮ ಜರುಗಿಸಲಾಗಿದ್ದು, ಸದರಿಯವರು ಖಾಯಿಲೆ ಅಥವಾ ಹೆರಿಗೆ ನಿಮಿತ್ತ ರಜೆ ಪಡೆದುಕೊಂಡಲ್ಲಿ ಇ.ಎಸ್.ಐ ವತಿಯಿಂದ ಸೂಕ್ತ ವೈದ್ಯಕೀಯ ಸೌಲಭ್ಯದ ಜೊತೆ ಇ.ಎಸ್.ಐ ಕಾಯ್ದೆಯಡಿ ಸದರಿ ದಿನಗಳ ವೇತನವನ್ನು ಸಹ ಇ.ಎಸ್.ಐ ವತಿಯಿಂದ ನೇರವಾಗಿ ಪಾವತಿಸಲಾಗುತ್ತಿರುವ ವಿಷಯವನ್ನು ತಿಳಿಸುತ್ತಾ, ಎಲ್ಲಾ ವಾಹನ ಚಾಲಕರು ಮತ್ತು ಸಹಾಯಕರಿಗೂ ಸಹ ಸದರಿ ವ್ಯವಸ್ಥೆಯನ್ನು ಅಂದರೆ ಇ.ಎಸ್.ಐ ವ್ಯವಸ್ಥೆಯನ್ನು ಹೊರ ಗುತ್ತಿಗೆದಾರರ/ಸರಬರಾಜುದಾರರ ಮೂಲಕ ಒದಗಿಸಲಾಗುತ್ತಿದೆ.

ಸಾಧನ ಸಲಕರಣೆಗಳು ಮತ್ತು ಸುರಕ್ಷತಾ ಸೌಲಭ್ಯ

1. ಪೌರಕಾರ್ಮಿಕರಿಗೆ ಸುರಕ್ಷತಾ ಸಾಮಗ್ರಿಗಳಾದ ಗ್ಲೌಸ್, ಮಾಸ್ಕ್, ಏಪ್ರಾನ್ ಮತ್ತು ಶೂಸ್ ಒದಗಿಸಲಾಗಿದೆ. ಪಾಲಿಕೆಯ ಖಾಯಂ ಪೌರಕಾರ್ಮಿಕರುಗಳಿಗೆ ಪಾಲಿಕೆ ವತಿಯಿಂದಲೇ ಅವಶ್ಯಕವಿರುವ ಸಾಧನ ಸಲಕರಣೆಗಳು ಮತ್ತು ಸುರಕ್ಷತಾ ದಿರಿಸುಗಳನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆ ಹಾಗೂ ಗುತ್ತಿಗೆ ಪೌರಕಾರ್ಮಿಕರಿಗೆ ಗುತ್ತಿಗೆದಾರರ ಮುಖಾಂತರ ನೀಡಲಾಗುತ್ತಿದೆ.

2. ನೇರವೇತನ ಪೌರಕಾರ್ಮಿಕರಿಗೆ ರಸ್ತೆಗುಡಿಸಲು ಪೊರಕೆಗಾಗಿ ರೂ.200/- ಗಳನ್ನು ಮಾಹೆಯಾನ ವೇತನ ಮೂಲಕ ಒದಗಿಸಲಾಗುತ್ತಿದೆ.

ಇತರೆ ಸೌಲಭ್ಯ:

1. ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಪೌರಕಾರ್ಮಿಕರುಗಳಿಗೆ ದಿನಾಂಕ 08-11-2016 ರಿಂದ ಪ್ರತಿನಿತ್ಯ ಮಧ್ಯಾಹ್ನ ಬಿಸಿ ಊಟದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
2. ಪೌರಕಾರ್ಮಿಕರುಗಳಿಗೆ ಗುರುತಿನ ಚೀಟಿಯನ್ನು ನೀಡಲಾಗಿರುತ್ತದೆ.
3. ಬಿ.ಪಿ.ಎಲ್. ಕಾರ್ಡ್ ಹೊಂದಿರುವ ಗುತ್ತಿಗೆ ಪೌರಕಾರ್ಮಿಕರ ಮಕ್ಕಳಿಗೆ ಖಾಸಗಿ ಶಾಲಾ & ಕಾಲೇಜುಗಳಲ್ಲಿ ಉಚಿತ ವಿದ್ಯಾಭ್ಯಾಸ ಪಡೆಯುವ ಅವಕಾಶ ಕಲ್ಪಿಸಲಾಗಿದೆ ಮತ್ತು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಹೊರದೇಶಕ್ಕೆ ಹೋಗಲು ಸಹ ಅವಕಾಶವಿರುತ್ತದೆ.
4. ಪೌರಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸದ ಶಿಕ್ಷಣ ಶುಲ್ಕ ಮರುಪಾವತಿ, ಪ್ರೋತ್ಸಾಹಧನ ಹಾಗೂ ಪೌರಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳನ್ನು ಪಡೆಯಲು ಆದಾಯ ಮಿತಿಯಿಂದ ವಿನಾಯಿತಿ ನೀಡಲಾಗಿರುತ್ತದೆ.
5. ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಪೌರಕಾರ್ಮಿಕರಿಗೆ ಗೃಹಭಾಗ್ಯ ಯೋಜನೆಯಡಿ ಬಿಡಿಎ ವತಿಯಿಂದ ವಸತಿ ಗೃಹ ಕಲ್ಪಿಸುವ ಯೋಜನೆ ರೂಪಿಸಲಾಗಿದೆ.
6. ಘನ ಸರ್ಕಾರದ ಆದೇಶದಂತೆ ಪಾಲಿಕೆಯ ಎಲ್ಲಾ ವಲಯಗಳಿಂದ ವಾರ್ಡ್‌ಗೆ ಒಬ್ಬರು ಪೌರಕಾರ್ಮಿಕರಂತೆ ಒಟ್ಟು 198 ಖಾಯಂ ಪೌರಕಾರ್ಮಿಕರನ್ನು ಅಧ್ಯಯನಕ್ಕಾಗಿ ಸಿಂಗಾಪುರ್ ವಿದೇಶ ಪ್ರವಾಸಕ್ಕೆ ಕಳುಹಿಸಲಾಗಿದೆ.
7. ಅಂಬೇಡ್ಕರ್ ಜಯಂತಿಯ ಪ್ರಯುಕ್ತ ಈ ವರ್ಷ ಖಾಯಂ ಪೌರಕಾರ್ಮಿಕರಿಗೆ ರೂ.21,000/- ಹಾಗೂ ನೇರವೇತನ ಪೌರಕಾರ್ಮಿಕರಿಗೆ ರೂ.7,000/- ಬೋನಸ್ ನೀಡಲಾಗುತ್ತಿರುತ್ತದೆ.
8. ಪಾಲಿಕೆಯ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರುಗಳಿಗೆ ಕಳೆದ 2 ವರ್ಷವು ಎರಡು ಜೊತೆ ಸಮವಸ್ತ್ರಗಳನ್ನು ಒದಗಿಸಲಾಗುತ್ತಿರುತ್ತದೆ.
9. ಪೌರಕಾರ್ಮಿಕರುಗಳಿಗೆ ಕಾರ್ಯನಿರ್ವಹಿಸಲು ಸುರಕ್ಷತಾ ಧಿರಸು, ಗ್ಯಾಂಗ್ ವರ್ಕ್ ಸಾಮಗ್ರಿಗಳನ್ನು ಒದಗಿಸಲಾಗಿರುತ್ತದೆ.
10. ಸರ್ಕಾರದ ಅನುದಾನದಡಿಯಲ್ಲಿ 220 ಸುವಿಧ ಕ್ಯಾಬಿನ್‌ಗಳನ್ನು ಸುಸಜ್ಜಿತವಾಗಿ ನಿರ್ಮಿಸಲಾಗುತ್ತಿದ್ದು, ಅವುಗಳಲ್ಲಿ ಮಹಿಳೆಯರಿಗೆ ಮತ್ತು ಪುರುಷ ಪೌರಕಾರ್ಮಿಕರಿಗೆ ಪ್ರತ್ಯೇಕ ಶೌಚಾಲಯ ಮತ್ತು ಬಟ್ಟೆ

ಬದಲಾಯಿಸುವ ಪಿಜನ್ ಬಾಕ್ಸ್, ಕುಡಿಯುವ ನೀರಿನ ವ್ಯವಸ್ಥೆ, ಚಾರ್ಜಿಂಗ್ ಪಾಯಿಂಟ್ ಇತ್ಯಾದಿಗಳನ್ನು ಕಲ್ಪಿಸಲಾಗಿರುತ್ತದೆ. ಇವುಗಳನ್ನು ಪಾಲಿಕೆಯ 220 ಸ್ಥಳಗಳಲ್ಲಿ ವ್ಯವಸ್ಥಿತವಾಗಿ ನಿರ್ಮಿಸುವ ಕಾರ್ಯ ಪ್ರಗತಿಯಲ್ಲಿದ್ದು, ಈಗಾಗಲೇ ಸುಮಾರು 140 ಸುವಿಧಾ ಕ್ಯಾಬಿನ್‌ಗಳನ್ನು ಮಸ್ಟರಿಂಗ್ ಪ್ರದೇಶಗಳಲ್ಲಿ ಅಳವಡಿಸಲಾಗಿರುತ್ತದೆ.

11. 60 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ನೇರ ವೇತನ ಪೌರಕಾರ್ಮಿಕರಿಗೆ ಈಗಾಗಲೇ ಪಾಲಿಕೆ ಮತ್ತು ಪೌರಕಾರ್ಮಿಕರ ಜಂಟಿ ಖಾತೆಯಲ್ಲಿ ರೂ. 10 ಲಕ್ಷಗಳನ್ನು ಠಿಡಿಗಂಟು ರೂಪದಲ್ಲಿ ಠೇವಣಿ ಇಟ್ಟು ಅದರಿಂದ ಬರುವ ಬಡ್ಡಿಯನ್ನು ಪಿಂಚಣಿ ರೂಪದಲ್ಲಿ ಪಾವತಿಸಲು ಆದೇಶವಾಗಿರುತ್ತದೆ. ಈ ಸೌಲಭ್ಯವನ್ನು ಪೌರಕಾರ್ಮಿಕರು ಮೃತರಾದಲ್ಲಿ ಅವರ ಗಂಡ/ಹೆಂಡತಿ ಅಥವಾ ಅಪ್ರಾಪ್ತ ಮಕ್ಕಳಿಗೆ ಒದಗಿಸಲು ಸಹ ಆದೇಶವಾಗಿರತ್ತದೆ. ಅದರಂತೆ ಎಲ್ಲಾ ನೇರವೇತನ ಪೌರಕಾರ್ಮಿಕರು ನಿವೃತ್ತಿ ಹೊಂದಿದಲ್ಲಿ ರೂ.10 ಲಕ್ಷಗಳ ಠಿಡಗಂಟು ಠೇವಣಿ ಇಟ್ಟು ಅದರಿಂದ ಬರುವ ಬಡ್ಡಿಯನ್ನು ಪಿಂಚಣಿ ರೂಪದಲ್ಲಿ ಪಾವತಿಸಲು ಕ್ರಮವಹಿಸಲಾಗುತ್ತಿದೆ.

12. ಇತ್ತೀಚಿಗೆ ಸರ್ಕಾರದ ವತಿಯಿಂದ ಪೌರಕಾರ್ಮಿಕರಿಗೆ ರೂ.2,000/- Hard Ship Allowance ನೀಡಲು ಆದೇಶವಾಗಿದ್ದು, ಜಾರಿಗೊಳಿಸಲಾಗಿರುತ್ತದೆ. ಇದಲ್ಲದೇ, ಮೇಲ್ವಿಚಾರಕರಿಗೆ ಮಾಹೆಯಾನ ರೂ.2,000/- ಗಳನ್ನು ಹೆಚ್ಚುವರಿಯಾಗಿ ಪಾವತಿಸಲು ಆದೇಶವಾಗಿದ್ದು, ಅದನ್ನು ಸಹ ಪಾವತಿಸಲು ಕ್ರಮವಹಿಸಲಾಗಿರುತ್ತದೆ.

13. ನೇರವೇತನ ಪೌರಕಾರ್ಮಿಕರು ಸೇವೆಯಲ್ಲಿದ್ದಾಗ ಮೃತರಾದಲ್ಲಿ ಸದರಿಯವರ ಅವಲಂಬಿತರಿಗೆ ತಕ್ಷಣಕ್ಕೆ ಶವಸಂಸ್ಕಾರಕ್ಕಾಗಿ ರೂ.20,000/-ಗಳನ್ನು ನೀಡಲಾಗುತ್ತಿದ್ದು, ಸದರಿಯವರ ನೈಜ ಕಾನೂನು ಉತ್ತರಾಧಿಕಾರಿಗೆ ರೂ.10 ಲಕ್ಷಗಳನ್ನು ನೀಡಲಾಗುತ್ತದೆ.

**Chief Engineer**
**Solid Waste Management**
**Bruhat Bengaluru Mahanagara Palike**